ಸದನದಲ್ಲಿ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಮಂಗಳವಾರ, ದಿನಾಂಕ : 17 ನೇ ಮಾರ್ಚ್, 2020

ನಗರೋತ್ಥಾನ ಯೋಜನೆಯ ಕಾಮಗಾರಿಗಳ ಕುರಿತು

ಶ್ರೀ ರಘುನಾಥ್‌ರಾವ್ ಮಲ್ಕಾಪೂರೆ(ವಿಧಾನಸಭೆಯಿಂದ ಚುನಾಯಿತರಾದವರು):-

163 (1261) ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೀದರ್ ನಗರದಲ್ಲಿ ನಗರೋತ್ಥಾನ ಯೋಜನೆಯಡಿ 1,2,3 ರ ಹಂತ ಯಾವಾಗ ಪ್ರಾರಂಭಿಸಲಾಯಿತು ; ಈ ಯೋಜನೆಗೆ ಸರ್ಕಾರವು ಹಂತಗಳವಾರು ಎಷ್ಟು ಹಣ ಬಿಡುಗಡೆ ಮಾಡಿದೆ ; ಮಾಡಿದ್ದಲ್ಲಿ, ಲೆಕ್ಕ ಶೀರ್ಷಿಕೆಗಳವಾರು, ಹಂತವಾರು, ವರ್ಷವಾರು ಕಾಮಗಾರಿಗಳವಾರು, ಸಂಪೂರ್ಣ ಮಾಹಿತಿ ನೀಡುವುದು ;

(ಆ) ಬೀದರ್ ನಗರದಲ್ಲಿ ನಗರೋತ್ಥಾನ ಯೋಜನೆಯ ವಿವಿಧ ಹಂತದ ಕಾಮಗಾರಿಗಳು ಸರಿಯಾದ ಸಮಯಕ್ಕೆ ಮುಗಿದಿದೆಯೇ ; ಇಲ್ಲದಿದ್ದಲ್ಲಿ, ಈ ಗುತ್ತಿಗೆದಾರರ/ಅಧಿಕಾರಿಗಳ ಮೇಲೆ ಸರ್ಕಾರವು ಯಾವ ಕ್ರಮ ಕೈಗೊಂಡಿದೆ; (ಸ್ಪಷ್ಟ ಮಾಹಿತಿ ಒದಗಿಸುವುದು)

(ಇ) ನಗರೋತ್ಥಾನ 3ರ ಕಾಮಗಾರಿ ಯೋಜನೆ ಆಗಿದೆಯೇ ; ಈ ಯೋಜನೆಯ ಕಾಮಗಾರಿಗಳು ಯಾವುವು ; ಪ್ರಸಕ್ತ ಈ ಕಾಮಗಾರಿಗಳು ಯಾವ ಯಾವ ಹಂತದಲ್ಲಿವೆ ; ಕಾಮಗಾರಿಗಳ ಸ್ಥಳದ ಮಾಹಿತಿಯೊಂದಿಗೆ ವರ್ಷವಾರು ಸಂಪೂರ್ಣ ವಿವರ ನೀಡುವುದು ?